■ ವಿಶಾಖ ಎನ್.

# ಪ್ರಯೋಗ ಸೂರ್ಯನಿಗೆ ಪ್ರಶಸ್ತಿಯ ಪ್ರಭೆ




ಮಣಿರತ್ನಂ 1997ರಲ್ಲಿ ನಿರ್ಮಿಸಿದ್ದ 'ನೇರುಕ್ಕು ನೇರ್' ತಮಿಳು ಸಿನಿಮಾದಲ್ಲಿ ಸೂರ್ಯ ಮೊದಲು ಅಭಿನಯಿಸಿದ್ದು. ವಸಂತ್ ಎಂಬ ನಿರ್ದೇಶಕರ ಆ ಸಸ್ಪೆನ್ಸ್ ಥ್ರಿಲ್ಲರ್ ಅಷ್ಟಾಗಿ ಓಡಲಿಲ್ಲ. ಬಾಲಾ ನಿರ್ದೇಶನಕ್ಕೆ ಒಡ್ಡಿಕೊಂಡು, ನಾಲ್ಕು ವರ್ಷಗಳಾದ ಮೇಲೆ ಬಿಡುಗಡೆಯಾದ 'ನಂದಾ' ಸೂರ್ಯ ಅಭಿನಯ ಪ್ರತಿಭೆಯನ್ನು ಜನರಿಗೆ ಪರಿಚಯಿಸಿತು. ಅಲ್ಲಿಂದ ಇಲ್ಲಿಯವರೆಗೆ ಅವರು ನಿರ್ದೇಶಕರ ನಟನಾಗಿಯೇ ಉಳಿದಿದ್ದಾರೆ. ಅಷ್ಟೇ ಆಗದೆ, ನಿರ್ಮಾಪಕ, ಸಮಾಜ ಸೇವಕ, ಆಪ್ತೇಷ್ಟರ ಸಲಹೆಗಳನ್ನು ಕೇಳುತ್ತಾ ಹೊಸಬರಿಗೂ ಅವಕಾಶ ನೀಡುವಂಥ ಚುರುಕುಮತಿಯಾಗಿಯೂ ಗುರುತಾಗಿದ್ದಾರೆ. ಅವರ ಇವೆಲ್ಲ ಗುಣಗಳಿಗೂ ಕಳಸವಿಟ್ಟಂತೆ ರಾಷ್ಟ್ರ ಪ್ರಶಸ್ತಿ ಅವರಿಗೆ ಒಲಿದುಬಂದಿದೆ.

'ಸೂರಾರೈ ಪೋಟ್ರು' ತಮಿಳು ಸಿನಿಮಾ ಕಥೆಯನ್ನು ಸೂರ್ಯ ತಾವಾಗಿಯೆ ಒಪ್ಪಿಕೊಂಡಿದ್ದಲ್ಲ. ಸುಧಾ ಕೊಂಗಾರಾ ಕೋವಿಡ್ ಕಾಲದಲ್ಲಿ ಚಿತ್ರಕಥೆ ಬರೆದು, ನಿರ್ದೇಶಿಸಲೆಂದು ಸಜ್ಜಾಗಿದ್ದ ಚಿತ್ರ ಅದು. ಕ್ಯಾಪ್ಟನ್ ಗೋಪಿನಾಥ್ ವೃತ್ತಿಬದುಕಿನ ಯಶಸ್ವಿ ಕಥೆಯನ್ನು ತಮಿಳು ನೆಲದ ಸಿನಿಮಾ ಆಗಿಸುವುದು ಹೇಗೆ ಎನ್ನುವುದು ಜಿಜ್ಞಾಸೆ. ಅಂಥದೊಂದು ಕಥೆಯನ್ನು ಒಪ್ಪಿಕೊಳ್ಳುವಂತೆ ಸೂರ್ಯ ಅವರ ಮನವೊಲಿಸಿದ್ದು ಅವರ ಪತ್ನಿ ಜ್ಯೋತಿಕಾ. ಅದಕ್ಕೇ ರಾಷ್ಟ್ರ ಪ್ರಶಸ್ತಿ ಸಂದೊಡನೆ ಅವರು ಮೊದಲು ಧನ್ಯವಾದ ಹೇಳಿದ್ದು ತಮ್ಮ ಪ್ರೀತಿಪಾತ್ರ ಪತ್ನಿಗೆ. ಆಮೇಲೆ ಗಂಭೀರ ವಸ್ತುವನ್ನು ದ್ರಾವಿಡ ನೆಲದ ಸಿನಿಮಾ ಆಗಿ ಹೊಸೆದ ನಿರ್ದೇಶಕಿ ಸುಧಾ ಅವರಿಗೆ ಅವರು ಶಹಬ್ಬಾಸ್ ಹೇಳಿದರು.

'ಸೂರ್ಯ' ತಮ್ಮ ವೃತ್ತಿಬದುಕಿನಲ್ಲಿ ಕೆಲವು ಅನಿರೀಕ್ಷಿತ ನಿರ್ಣಯಗಳನ್ನು ತೆಗೆದುಕೊಳ್ಳುತ್ತಾ ಬಂದವರು. ಎ.ಆರ್. ಮುರುಗದಾಸ್ 'ಗಜಿನಿ' ತಮಿಳು ಸಿನಿಮಾ ಮಾಡಲು ಹೊರಟಾಗ ಅದು ಅಸಾಧ್ಯವೇನೊ ಎನ್ನುವಂತಹ ಪರಿಸ್ಥಿತಿ ಇತ್ತು. ಅಜಿತ್ ನಾಯಕನಾಗಲು ಒಪ್ಪಿಕೊಂಡು, ಕೆಲವು ದಿನಗಳ ಚಿತ್ರೀಕರಣವಾದ ಮೇಲೆ ಬೇಡ ಎಂದು ಕೈಚೆಲ್ಲಿಬಿಟ್ಟರು. ಆಗ ಎಸ್. ಚಂದ್ರಶೇಖರನ್ ಎಂಬ ನಿರ್ಮಾಪಕರನ್ನು ಹುಡುಕಿಕೊಟ್ಟು, ಆದಷ್ಟು ಚೊಕ್ಕವಾದ ಬಜೆಟ್‌ನಲ್ಲಿ ಸಿನಿಮಾ ಮಾಡಬೇಕು ಎಂದು ಮುರುಗದಾಸ್ ಅವರನ್ನು ಒಪ್ಪಿಸಿದ್ದೇ ಸೂರ್ಯ. ಅಷ್ಟೇ ಅಲ್ಲ, ಅದರಲ್ಲಿ ನಾಯಕನಾಗಲು ಖುದ್ದು ಅವರೇ ನಿರ್ಧರಿಸಿದ್ದು ಮಹತ್ವದ ನಿಲುವು. ಕ್ರಿಸ್ಟೊಫರ್ ನೋಲನ್ ನಿರ್ದೇಶನದ 'ಮೆಮೆಂಟೊ' ಇಂಗ್ಲಿಷ್ ಸಿನಿಮಾದ ಭಾರತೀಕರಣಗೊಂಡ ವಸ್ತು 'ಗಜಿನಿ'. ಸುಮಾರು ಏಳು ಕೋಟಿ ರೂಪಾಯಿ ಬಜೆಟ್‌ನಲ್ಲಿ 2005ರಲ್ಲಿ ತಯಾರಾದ ಆ ಸಿನಿಮಾ ₹50 ಕೋಟಿಗೂ ಮೀರಿ ಸಂಪಾದನೆ ಮಾಡಿತು. ಅದಕ್ಕಿಂತ ನಾಲ್ಕು ಪಟ್ಟು ಹೆಚ್ಚು ಬಜೆಟ್‌ನಲ್ಲಿ ಅದೇ ಸಿನಿಮಾವನ್ನು ಅಮೀರ್ ಖಾನ್ ಹಿಂದಿಯಲ್ಲೂ ರೀಮೇಕ್ ಮಾಡಿ, ಕಂಡಾಪಟ್ಟೆ ಹಣ ಮಾಡಿದ್ದು ಇನ್ನೊಂದು ವಿಶೇಷ. ಸೂರ್ಯ ಆ ದಿನ ನಿರ್ದೇಶಕರ ಕೈಹಿಡಿಯದೇ ಹೋಗಿದ್ದಿದ್ದರೆ, ಅಂಥದೊಂದು ಇತಿಹಾಸವೇ ಸೃಷ್ಟಿಯಾಗುತ್ತಿರಲಿಲ್ಲ.

ಸೂರ್ಯ ತಮ್ಮನ್ನು ತಾವು ನಟನಾಗಿ ಪ್ರಯೋಗಕ್ಕೆ ಒಡ್ಡಿಕೊಂಡವರು. 'ಸಿಂಗಂ' ತರಹದ ಜನಪ್ರಿಯ ಬ್ರಾಂಡ್ ಅನ್ನು ಅವರು ಕೊಟ್ಟಿದ್ದು ಇದಕ್ಕೆ ಸಾಕ್ಷಿ. ಈ ಬ್ರಾಂಡ್‌ಗೂ 'ಗಜಿನಿ'ಯ ಆ ಬ್ರಾಂಡ್‌ಗೂ ನಡುವಿನ ಅಂತರ ಬರೀ ಐದು ವರ್ಷಗಳು. ಹರಿ ಎಂಬ ಮಸಾಲಾ ಚಿತ್ರಗಳ ನಿರ್ದೇಶಕನ ಕೈಗೆ 'ಸಿಂಗಂ' ಒಪ್ಪಿಸಿದ ನಿರ್ಣಯದಲ್ಲೂ ಸೂರ್ಯ ಅವರ ಪಾತ್ರವಿದೆ. ಅದು ಹಿಂದಿ, ಕನ್ನಡದಲ್ಲೂ ರೀಮೇಕ್ ಆಗಿ ಯಶಸ್ವಿಯಾದದ್ದನ್ನು ಕಂಡೆವು. ಮೂರು ಭಾಗಗಳಲ್ಲಿ ಸೂರ್ಯ ಅದೇ ಚಿತ್ರದಲ್ಲಿ ನಟಿಸಿ, ಆ ಬ್ರಾಂಡ್ ಅನ್ನು ಇನ್ನಷ್ಟು ಉಜ್ಜಿದ್ದನ್ನೂ ನೋಡಿದೆವು.

ಆ್ಯಕ್ಷನ್ ಬ್ರಾಂಡ್‌ಗಳ ನಡುವೆಯೇ ಅವರು ಗೌತಮ್ ವಾಸುದೇವನ್ ಮೆನನ್ ಅವರಂತಹ ನಿರ್ದೇಶಕರ 'ವಾರನಂ ಆಯಿರಂ' ತಮಿಳು ಚಿತ್ರಕ್ಕೂ ಸೈ ಎಂದರು. ಅದಾಗಿ ಒಂದೇ ವರ್ಷದಲ್ಲಿ 'ಅಯನ್' ಮೂಲಕ ನಿರ್ದೇಶಕ ಕೆ.ವಿ. ಆನಂದ್ ಈ ನಟನಿಗೆ ಆ್ಯಕ್ಷನ್ ಸ್ಟಾರ್ ಇಮೇಜನ್ನು ತಂದರು.

'ಗಜಿನಿ' ಯಶಸ್ಸಿನ ದೀರ್ಘಾವಧಿಯ ನಂತರ, 2011ರಲ್ಲಿ ಅದೇ ನಿರ್ದೇಶಕರ '7 ಆಮ್ ಅರಿವು' ಎಂಬ ಸೈ–ಫೈ ಮಾರ್ಷಲ್ ಆರ್ಟ್ಸ್ ಸಿನಿಪ್ರಯೋಗಕ್ಕೂ ಸೂರ್ಯ ಎದೆಗೊಟ್ಟರು. ವಸಂತ ಕುಮಾರ್ ಎಂಬ ನಿರ್ದೇಶಕನ '24' ಶೀರ್ಷಿಕೆಯ ಟೈಮ್ ಟ್ರಾವೆಲ್ ಚಿತ್ರದ ನಾಯಕನಾಗಲು ಸೂರ್ಯ ಒಪ್ಪಿದ್ದೂ 2015ರಲ್ಲಿ ಸುದ್ದಿಯಾಗಿತ್ತು. ಅದು ಕಮರ್ಷಿಯಲ್ ಆಗಿ ಹೆಚ್ಚು ಜನಪ್ರಿಯವಾಗದೇ ಇದ್ದರೂ ನಟನ ಪ್ರಯೋಗಶೀಲತೆಗೆ ಶಹಬ್ಬಾಸ್‌ಗಿರಿ ಸಂದಿತು.

'ಸೂರಾರೈ ಪೋಟ್ರು' ತರಹದ ಚಿತ್ರದಲ್ಲಿ ಸೂರ್ಯ ನಟಿಸಿದ್ದಷ್ಟೇ ಅಲ್ಲ, ಅದಕ್ಕೆ ಬಂಡವಾಳವನ್ನೂ ಹೂಡಿದ್ದು ಮಹತ್ವದ ಸಂಗತಿ. ಅದಾದ ಮೇಲೆ ಟಿ.ಜೆ. ಜ್ಞಾನವೇಲ್ ನಿರ್ದೇಶಿಸಿದ 'ಜೈ ಭೀಮ್' ಚಿತ್ರಕ್ಕೆ ಬಂಡವಾಳ ಹಾಕಿ, ಅಭಿನಯಿಸಲು ಒಪ್ಪಿದ್ದು ಇನ್ನೊಂದು ಗಮನಾರ್ಹ ಬೆಳವಣಿಗೆ. ಜಸ್ಟಿಸ್ ಕೆ. ಚಂದ್ರು ಹೋರಾಡಿದ ಒಂದು ನ್ಯಾಯಾಲಯದ ಪ್ರಕರಣವನ್ನು ಇಟ್ಟುಕೊಂಡು ತಯಾರಾದ ಈ ಸಿನಿಮಾ ದೇಶದ ಜಾತಿ ವ್ಯವಸ್ಥೆಯ ಸೂಕ್ಷ್ಮಗಳನ್ನು ಈ ಕಾಲದಲ್ಲೂ ತೆರೆಮೇಲೆ ತಂದಿದ್ದು ವಿಶೇಷ.

ಬಾಲಾ ನಿರ್ದೇಶನದಲ್ಲೇ 'ವನಗಾನ್' ಎಂಬ ಇನ್ನೊಂದು ತಮಿಳು ಸಿನಿಮಾ ಕೆಲಸದಲ್ಲೀಗ ಸೂರ್ಯ ತೊಡಗಿದ್ದಾರೆ. ಅದರ ನಿರ್ಮಾಪಕರೂ ಅವರೇ. ಪತ್ನಿ ಜ್ಯೋತಿಕಾ ಕೂಡ ಅದಕ್ಕೆ ಸಾಥ್ ನೀಡಿದ್ದಾರೆ. ನಟನೊಬ್ಬ ತನ್ನ ಸಿನಿಪಥವನ್ನು ತಾನೇ ನಿರ್ಧರಿಸುತ್ತಾ ಹೋಗುವ ಈ ಪರಿ ಆಸಕ್ತಿಕರವಂತೂ ಹೌದು. ■